**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**
**ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ**
**ಹೇರೋಹಳ್ಳಿ ಉಪ-ವಿಭಾಗ, ಭಾರತ ನಗರ 1ನೇ ಹಂತ, ಬೆಂಗಳೂರು-91.**

ಸಂಖ್ಯೆ:ಸ.ಕಾ.ಅ/ಹೇಉವಿ/ಪಿ.ಆರ್/ 19 /20-21 ದಿನಾಂಕ:05-06-2021

**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರಾ.ರಾ.ನಗರ ವಲಯ ಹೇರೋಹಳ್ಳಿ ಉಪ-ವಿಭಾಗದ ವಾರ್ಡ್ ನಂ.72ರಲ್ಲಿ ದಿನಾಂಕ:05-06-2021 ರಲ್ಲಿ ನಡೆದ ವಾರ್ಡ್ ಸಮಿತಿ ಸಭಾ ನಡುವಳಿ.**

**ಈ ಕೆಳಕಂಡ ಸದಸ್ಯರು ಹಾಗೂ ಅಧಿಕಾರಿಗಳು ಸಭೆಯಲ್ಲಿ ಹಾಜರಾಗಿದ್ದವರ ವಿವರಗಳು**

| ಕ್ರಮ ಸಂಖ್ಯೆ | ಹೆಸರು | ಪದನಾಮ |
|---|---|---|
| 01 | ಶ್ರೀ.ಎಸ್.ಆರ್.ಪ್ರಕಾಶ್ | ವಾರ್ಡ್ ಸಮಿತಿ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು |
| 02 | ಶ್ರೀ ಚಿತ್ತಯ್ಯ | ಸಹಾಯಕ ಅಭಿಯಂತರರು ಮತ್ತು ಸದಸ್ಯ ಕಾರ್ಯದರ್ಶಿ ವಾರ್ಡ್ ನಂ.72 ಹೇರೋಹಳ್ಳಿ |
| 03 | ಶ್ರೀ.ಹನುಮಂತರಾಜು | ಹಿರಿಯ ಆರೋಗ್ಯ ಪರಿವೀಕ್ಷಕರು |
| 04 | ಶ್ರೀ.ಶ್ರೀನಿವಾಸಯ್ಯ | ಸಹಕಂದಾಯ ಅಧಿಕಾರಿ ಹೇರೋಹಳ್ಳಿ |
| 05 | ಶ್ರೀ.ಡಾ॥ವಿವೇಕ್ | ಸರ್ಕಾರಿ ಆಸ್ಪತ್ರೆ ವೈದ್ಯರು ಹೇರೋಹಳ್ಳಿ |
| 06 | ಶ್ರೀ.ಸೋಮಶೇಖರ್ | ಬಿ.ಡಬ್ಲ್ಯೂ.ಎಸ್.ಎಸ್.ಬಿ |
| 07 | ಶ್ರೀ.ಸಿ.ಟಿ.ನರಸೇಗೌಡ | ಸ್ಥಳೀಯ ನಿವಾಸಿಗಳು |
| 08 | ಶ್ರೀ.ನಿಖಿಲ್‌ಗೌಡ | ಸ್ಥಳೀಯ ನಿವಾಸಿಗಳು |

ವಾರ್ಡ್ ಸಮಿತಿ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳಾದ ಶ್ರೀ ಎಸ್.ಆರ್.ಪ್ರಕಾಶ್ ರವರು ಮತ್ತು ಸಹಾಯಕ ಅಭಿಯಂತರರು ಮತ್ತು ಸದಸ್ಯ ಕಾರ್ಯದರ್ಶಿಗಳಾದ ಶ್ರೀ ಚಿತ್ತಯ್ಯ ರವರು ಸಭೆಗೆ ಹಾಜರಿದ್ದು ಎಲ್ಲರಿಗೂ ಸ್ವಾಗತಿಸುವ ಮೂಲಕ ಸಭೆಯನ್ನು ಪ್ರಾರಂಭಿಸುತ್ತಾ ವಾರ್ಡ್ ಸಮಿತಿ ಸಭೆಯಲ್ಲಿ ಚರ್ಚಿಸಬೇಕಾದ ಅಜೆಂಡಾ ವಿಷಯಗಳ ಬಗ್ಗೆ ತಿಳಿಸಿದರು.

**ಕೋವಿಡ್-19 ಸಂಬಂಧ ಚರ್ಚಿಸಲಾದ ವಿಷಯಗಳು:-**

1. ಸಭೆಯಲ್ಲಿ ಅಧ್ಯಕ್ಷರು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿನ ಸ್ವಾಮಿ ವಿವೇಕಾನಂದ ಯೋಗ ಭವನದಲ್ಲಿ ಸಾರ್ವಜನಿಕರಿಗಾಗಿ ಬಿಬಿಎಂಪಿ ವತಿಯಿಂದ ಕೋವಿಡ್ ಟ್ರಯೇಜ್ ಕೇಂದ್ರವನ್ನು ತೆರೆದಿದ್ದು, ಸ್ಥಳೀಯ ನಿವಾಸಿಗಳು ಇದರ ಉಪಯೋಗ ಪಡೆಯಬೇಕೆಂದು ಸಭೆಯಲ್ಲಿ ಸೂಚಿಸಿದರು. ವಾರ್ಡ್ ನಂ.72 ರ ವ್ಯಾಪ್ತಿಯ ನಿವಾಸಿಗಳಿಗೆ ಪಾಲಿಕೆ ವತಿಯಿಂದ ನೀಡಲಾಗುತ್ತಿರುವ ವ್ಯಾಕ್ಸಿನ್ ಅನ್ನು ಪ್ರದೇಶದಲ್ಲಿ ಕೇಂದ್ರಗಳನ್ನು ಸ್ಥಾಪಿಸಿ ಲಸಿಕೆಗಳನ್ನು ನೀಡುವಂತೆ ಸಂಬಂಧಪಟ್ಟ ಆರೋಗ್ಯ ವೈದ್ಯಾಧಿಕಾರಿಗಳಿಗೆ ಸಭೆಯಲ್ಲಿ ಸೂಚಿಸಿದರು.

ಹಾಗೂ ಈಗಾಗಲೇ ಕೋವಿಡ್-19 ಕೆಲಸಕ್ಕೆ ನಿಯೋಜನೆ ಆಗಿರುವಂತಹ ಅಧಿಕಾರಿ ಮತು ನೌಕರರುಗಳಿಗೆ ಲಸಿಕೆಯನ್ನು ನೀಡುವಂತೆ ಸೂಚಿಸಲಾಯಿತು. ಮತ್ತು ಕಾಂಟ್ಯಾಕ್ಟ್ ಟ್ರೇಸಿಂಗ್ ಬಿ.ಎಲ್.ಓ ಗಳಿಗೆ ಮಾಸ್ಕ್ ಸ್ಯಾನಿಟೇಜರ್ ಮತ್ತು ಪೇಸ್ ಶೀಲ್ಡ್ ಸೌಲಭ್ಯಗಳನ್ನು ಒದಗಿಸುವಂತೆ ಸಹಕಂದಾಯ ಅಧಿಕಾರಿರವರು ಕೋರಿದ್ದರ ಮೇರೆಗೆ ಈ ಬಗ್ಗೆ ಆರೋಗ್ಯ ವೈದ್ಯಾಧಿಕಾರಿಗಳು ಹಾಗೂ ಹಿರಿಯ ಆರೋಗ್ಯ ಪರಿವೀಕ್ಷಕರು ಕ್ರಮ ಕೈಗೊಳ್ಳುವಂತೆ ಸಭೆಯಲ್ಲಿ ಸೂಚಿಲಾಯಿತು.

2. ಡಾ. ವಿವೇಕ್ ರವರು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿ ಸಾರ್ವಜನಿಕರುಗಳಿಗೆ ಅನುಕೂಲವಾಗುವಂತೆ ಸ್ಥಾಪಿಸಲಾಗಿರುವ ಕೇಂದ್ರಗಳಲ್ಲಿ ಕೋವಿಡ್ ಲಸಿಕೆ ನಿಡಲಾಗುತ್ತಿದೆ ಎಂದು ತಿಳಿಸಿರುತ್ತಾರೆ.

3. ಹಿರಿಯ ಆರೋಗ್ಯ ಪರಿವೀಕ್ಷಕರು ಶ್ರೀ ಹನುಮಂತರಾಜುರವರು ಮಾತನಾಡಿ ವಾರ್ಡ್ 72 ರ ವ್ಯಾಪ್ತಿಯಲ್ಲಿ ಒಟ್ಟು 3957 ಪ್ರಕರಣಗಳಿದ್ದು, ಇದರಲ್ಲಿ ಡಿಸ್ಚಾರ್ಜ್ 3489, ಸಕ್ರಿಯ ಪ್ರಕರಣಗಳು 369, ಇದರಲ್ಲಿ 336 ಹೋಮ್ ಐಸೋಲೇಷನಲ್ಲಿದ್ದು 23 ಖಾಸಗಿ ಆಸ್ಪತ್ರೆ, 10 ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆಯುತ್ತಿದ್ದಾರೆ. ಹಾಗೂ ಮರಣದ ಪ್ರಕರಣಗಳು 99 ಆಗಿವೆ ಎಂದು ತಿಳಿಸಿದರು. ದಿನಾಂಕ: 17-05-2020 ರಿಂದ ಯೋಗಭವನ ಕೇಂದ್ರದಲ್ಲಿ ಟ್ರೇಯೇಜ್ ಸೆಂಟರ್ ಉದ್ಘಾಟನೆ ಆಗಿದ್ದು ಇಲ್ಲಿ 2 ದಿನದ 24 ಗಂಟೆಗಳು ಇಬ್ಬರು ಡಾಕ್ಟರ್ಸ್, ಇಬ್ಬರು ನರ್ಸ್, ಅಟೆಂಡರ್ಸ್ ಹಾಗೂ ಇಬ್ಬರು ಮಾರ್ಷಲ್ಸ್‌ಗಳು ಕರ್ತವ್ಯ ನಿರ್ವಹಿಸುತ್ತಿದ್ದು, ಕೋವಿಡ್ ಬಂದ 176 ಜನರಿಗೆ ಚಿಕಿತ್ಸೆ ನೀಡಿದ್ದು ಹೆಚ್ಚಿನ ಚಿಕಿತ್ಸೆಗಾಗಿ 7 ಜನರನ್ನು ಕೋವಿಡ್ ಕೇರ್ ಸೆಂಟರ್‌ಗೆ ರವಾನಿಸಿದ್ದು, 5 ಜನರನ್ನು ಬಿಬಿಎಂಪಿ ವತಿಯಿಂದ ಪ್ರೈವೇಟ್ ಆಸ್ಪತ್ರೆಗಳಿಗೆ ರವಾನಿಸಲಾಗಿದೆ. ಮನೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ 165 ಜನರಿಗೆ ಹೋಮ್ ಐಸೋಲೇಷನ್ ಕಿಟ್ ಮತ್ತು ದಿನಸಿ ಕಿಟ್‌ಗಳನ್ನು ವಿತರಣೆ ಮಾಡಲಾಗಿದೆ. ಮನೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ರೋಗಿಗಳಿಗೆ ಮೊಬೈಲ್ ಟ್ರಯೇಜ್ ಟೀಂ ಮೂಲಕ ಮನೆಗಳಿಗೆ ಭೇಟಿ ನೀಡಲಾಗುತ್ತಿದೆ. ಪ್ರತಿದಿನ ಹೇರೋಹಳ್ಳಿ UPHC ಯಲ್ಲಿ ಸರಿಸುಮಾರು 350 ಜನಗಳಿಗೆ ಆರ್.ಟಿ.ಪಿಸಿ.ಆರ್ ಮತ್ತು ರ್ಯಾಪಿಡ್ ಟೆಸ್ಟ್ ಮಾಡಲಾಗುತ್ತಿದೆ. ಬ್ಯಾಡರಹಳ್ಳಿ ಸರ್ಕಾರಿ ಪ್ರಾಥಮಿಕ ಪಾಠಶಾಲೆಯಲ್ಲಿ 45 ವರ್ಷ ಮೇಲ್ಪಟ್ಟ ಸಾರ್ವಜನಿಕರಿಗೆ ಕೋವಿಡ್ ಶೀಲ್ಡ್ ಲಸಿಕೆ ನೀಡಲಾಗುತ್ತಿದೆ. ಮತ್ತು 18 ವರ್ಷ ಮೇಲ್ಪಟ್ಟ ಬೀದಿ ವ್ಯಾಪಾರಿಗಳು, ಪೆಟ್ರೋಲ್ ಬ್ಯಾಂಕ್, ಬಿ.ಎಸ್.ಎನ್.ಎಲ್. ಮತ್ತು ಕೆ.ಇ.ಬಿ. ಸಂಬಂಧಪಟ್ಟ ಕಛೇರಿಗಳಿಗೆ ಹೋಗಿ ಫ್ರಂಟ್‌ಲೈನ್ ವರ್ಕರ್‌ಗಳಿಗೆ ಲಸಿಕೆ ನೀಡಲಾಗುತ್ತಿದೆ.

4. ನೋಡಲ್ ಅಧಿಕಾರಿಯವರು ಮಾತನಾಡಿ ವಾರ್ಡ್ ನಂ.72 ರ ವ್ಯಾಪ್ತಿಯಲ್ಲಿ ಬರುವ ಮಾರುತಿನಗರ, ವಿಘ್ನೇಶ್ವರನಗರ, ಪ್ರಸನ್ನ ಲೇಔಟ್, ಕೆಂಪೇಗೌಡನಗರ ಈ ಭಾಗಗಳಲ್ಲಿ ಬಿ.ಡಬ್ಲಯೂ .ಎಸ್.ಎಸ್.ಬಿ ರವರು ಕುಡಿಯುವ ನೀರು ಪೈಪ್‌ಲೈನ್‌ಗಳನ್ನು ಅಳವಡಿಸಿದ್ದು ಈ ನಡುವೆ ಬಿದ್ದ ಭಾರಿ ಮಳೆಯಲ್ಲಿ ಪೈಪ್ ಲೈನ್ ಹಾಕಿರುವ ಜಾಗಗಳಲ್ಲಿ ಮಣ್ಣು ಕುಸಿದಿದ್ದು ಸಾರ್ವಜನಿಕರಿಗೆ ಸಂಚಾರಕ್ಕೆ ತೊಂದರೆಯಾಗುತ್ತಿದೆ. ಹಾಗೂ ಸದರಿ ಪ್ರದೇಶದ ಚರಂಡಿಗಳೆಲ್ಲಾ ಮಣ್ಣು ತುಂಬಿರುವುದರಿಂದ ಮಳೆ ನೀರು ಬಂದಾಗ ತಗ್ಗು ಪ್ರದೇಶದ ಮನೆಗಳಿಗೆ ನೀರು ನುಗ್ಗುತ್ತಿರುವುದರಿಂದ ಸದರಿ ಪ್ರದೇಶದ ನಿವಾಸಿಗಳು ದೂರವಾಣಿ ಮೂಲಕ ತಿಳಿಸಿದ್ದ ಮೇರೆಗೆ ವಾರ್ಡ್ ಸಹಾಯಕ ಅಭಿಯಂತರರು ಚಿತ್ತಯರವರು ಕೂಡಲೇ ಸದರಿ ಪ್ರದೇಶವನ್ನು ಪರಿಶೀಲನೆ ಮಾಡಿ ತೊಂದರೆ ಯಾಗುತ್ತಿರುವ ಪ್ರದೇಶಗಳಿಗೆ ಕ್ರಮ ಕೈಗೊಳ್ಳಲು ಸಭೆಯ ಮೂಲಕ ಸೂಚಿಲಾಗಿದೆ.

5. ವಾರ್ಡ್ ನಂ.72 ರ ವ್ಯಾಪ್ತಿಯಲ್ಲಿ ಬರುವ ಪಾರ್ಕ್‌ಗಳಲ್ಲಿ ಸಂಬಂಧಿಸಿದ ಇಲಾಖೆಯು ಸ್ವಚ್ಛತೆ ಕಾಪಾಡುತ್ತಿಲ್ಲ ಈ ಬಗ್ಗೆ ಚರ್ಚಿಸಲಾಗಿ ಹಾಗೂ ಸಂಬಂಧಪಟ್ಟ ಇಲಾಖೆಗೆ ತುರ್ತು ಕ್ರಮ ವಹಿಸಲು ಸಂಬಂಧಪಟ್ಟ ಇಲಾಖೆಗೆ ಸೂಚಿಸಿದರು.

<u>ವಂದನಾರ್ಪಣೆಯೊಂದಿಗೆ ಕಾರ್ಯದರ್ಶಿಗಳು ಸಭೆಯನ್ನು ಮುಕ್ತಾಯಗೊಳಿಸಿದರು.</u>

(signature) 7/6/2021
ಸದಸ್ಯ ಕಾರ್ಯದರ್ಶಿ
ಹಾಗೂ ಸಹಾಯಕ ಅಭಿಯಂರರು
ವಾರ್ಡ್ ನಂ.72 ಹೇರೋಹಳ್ಳಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

(signature) 7/6/21
ವಾರ್ಡ್ ಸಮಿತಿ ಅಧ್ಯಕ್ಷರು
ಹಾಗೂ ವಾರ್ಡ್‌ನ ನೋಡಲ್ ಅಧಿಕಾರಿ
ವಾರ್ಡ್ ನಂ.72 ಹೇರೋಹಳ್ಳಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ